ಗೃಹಮಂಡಲಿಯಲ್ಲಿ ನೇಮಕಾತಿ ಬಗ್ಗೆ

೧೯೭೩. ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್‌ಕಲ್).— ಮಾನ್ಯ ಗ್ರಾಮಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಗೃಹ ಮಂಡಳಿಗೆ ಆಯುಕ್ತರು, ಮುಖ್ಯ ಅಭಿಯಂತರರು ಮತ್ತು ಅಧೀಕ್ಷಕ ಅಭಿಯಂತರುಗಳ ನೇಮಕಾತಿಗಳನ್ನು ಮಾಡುವಾಗ, ಸರ್ಕಾರದವರು ಯಾವ ನಿಯಮಗಳನ್ನು ಪಾಲಿಸುತ್ತಾರೆ ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮಾಭಿವೃದ್ಧಿ, ವಕ್ಫ್ ಮತ್ತು ವಸತಿ ಸಚಿವರು).—

ಅ) ಗೃಹ ಮಂಡಳಿಗೆ ಆಯುಕ್ತರು, ಮುಖ್ಯ ಅಭಿಯಂತರರು ಮತ್ತು ಅಧೀಕ್ಷಕ ಅಭಿಯಂತರುಗಳನ್ನು, ಕರ್ನಾಟಕ ಗೃಹ ಮಂಡಳಿಯ ಕಾಯ್ದೆ ೧೯೬೨ ಕಲಂ ೧೦(೧) (೨) (೩) ಮತ್ತು ೪ರನ್ವಯ ನೇಮಕಾತಿ ಮಾಡಲಾಗುತ್ತದೆ.

ಮಂಡಳಿ ನಿಗಮಗಳ ಅಧ್ಯಕ್ಷರುಗಳ ಅಧಿಕಾರದ ಬಗ್ಗೆ

೧೯೭೪. ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್‌ಕಲ್), ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ), ಮತ್ತು ಎನ್. ಎಚ್. ಪೀಡ್ (ಇಂಡಿ).— ಮಾನ್ಯ ಗ್ರಾಮಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ವಿವಿಧ ಮಂಡಳಿ ನಿಗಮಗಳಲ್ಲಿನ ಅಧ್ಯಕ್ಷರುಗಳ ಮತ್ತು ಸದಸ್ಯರುಗಳ ಅಧಿಕಾರದ ವ್ಯಾಪ್ತಿಗಳೇನು ?

ಆ) ಅಧ್ಯಕ್ಷರುಗಳಿಗೆ ಹೆಚ್ಚಿನ ಅಧಿಕಾರವಿಲ್ಲದಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಉತ್ತಮ ಹಾಗೂ ಸಮರ್ಪಕ ಆಡಳಿತ ಉದ್ದೇಶದಿಂದ ಅಧ್ಯಕ್ಷರುಗಳಿಗೆ ಹೆಚ್ಚಿನ ಅಧಿಕಾರ ನೀಡುವಲ್ಲಿ ಸರ್ಕಾರದವರು ಏನಾದರೂ ಕ್ರಮ ಕೈಗೊಂಡಿದ್ದಾರೆಯೇ ?

ಈ) ಹಾಗಿದ್ದಲ್ಲಿ ಯಾವ ರೀತಿಯಲ್ಲಿ

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು).—

ಅ) ಭೂ ಸೇನಾ ನಿಗಮದ ಅಧ್ಯಕ್ಷರಿಗೆ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಅಧಿಕಾರ ವ್ಯಾಪ್ತಿ ಇದೆ.

ಆ) ನಿಜವಲ್ಲ

ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಅದೇ

ಕರ್ನಾಟಕ ಗೃಹ ಮಂಡಳಿಯ ಸಿ ಅಂಡ್ ಆರ್ ರೂಲ್ಸ್ ಬಗ್ಗೆ.

೧೯೭೯. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ಮತ್ತು ಮಲ್ಲಾರೀಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಗ್ರಾಮಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಸಿಬ್ಬಂದಿ ಬಗ್ಗೆ ಸಿ ಅಂಡ್ ಆರ್ ಪ್ರಸ್ತಾವನೆ ಸರ್ಕಾರ ಒಪ್ಪಿಗೆಗೆ ಬಂದರೂ ಇನ್ನೂ ಇತ್ಯರ್ಥವಾಗದಿರುವುದು ನಿಜವೇ ?

ಆ) ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಈ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಯಾವ ವರ್ಷದಲ್ಲಿ ಸಲ್ಲಿಸಿದೆ ಹಾಗೂ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಅಬ್ದುಲ್ ನಜೀರ್ ಸಾಬ್(ಗ್ರಾಮಾಣಾಭಿವೃದ್ಧಿ, ವಕ್ಫ್ ಮಂತ್ರಿ ಮತ್ತು ವಸತಿ ಸಚಿವರು).—

ಅ) ನಿಜ.

ಆ) ೧) ಮೊದಲನೆ ಬಾರಿಗೆ ೧೯೭೯ರಲ್ಲಿ

೨) ಕೆಲವು ಮಾರ್ಪಾಡುಗಳೊಂದಿಗೆ ಜೂನ್ ೧೯೮೫ರಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.

೩) ನಂತರ ಮತ್ತು ಕೆಲವು ಮಾರ್ಪಾಡುಗಳೊಂದಿಗೆ ಬೇರೆಯಾಗಿಯೇ ೧೯೮೭ರಲ್ಲಿ ಅಂತಿಮವಾಗಿ ಸಲ್ಲಿಸಲಾಗಿದೆ, ಸದರಿ ವಿಷಯವು ಸರಕಾರದ ಪರಿಶೀಲನೆಯಲ್ಲಿದೆ.

ರೋಣ ತಾಲ್ಲೂಕು ಬೆಳವಣಿಕೆ ಗ್ರಾಮಕ್ಕೆ ಕುಡಿಯುವ ನೀರಿನ ಪೂರೈಕೆ ಬಗ್ಗೆ.

೧೯೧೪. ಶ್ರೀ ಬಿ. ಆರ್. ಯಾವಗಲ್ (ನರಗುಂದ).—ಮಾನ್ಯ ಗ್ರಾಮಾಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೋಣ ತಾಲ್ಲೂಕು ಬೆಳವಂಕಿ ಗ್ರಾಮಕ್ಕೆ ಕುಡಿಯುವ ನೀರಿನ ಪೂರೈಕೆ ಯೋಜನೆ ಯಾವಾಗ ಮಂಜೂರಾಗಿದೆ ಮತ್ತು ಈಗ ಯಾವ ಹಂತದಲ್ಲಿದೆ, ಎಷ್ಟು ಹಣ ಖರ್ಚಾಗಿದೆ ?

ಆ) ಇದರ ವಿಳಂಬಕ್ಕೆ ಕಾರಣವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್(ಗ್ರಾಮಾಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು).—

ಅ) ೧. ದಿನಾಂಕ ೩೧-೩-೧೯೮೫ ರಂದು ೭.೮೫ ಲಕ್ಷ ರೂ.

೨. ಈ ಯೋಜನೆಯು, ಜಲಮೂಲ ಸ್ಥಾಪನೆ ಪಂಪುಮನೆ, ನೀರೆತ್ತುವ ಕೊಳವೆ ಮಾರ್ಗ ವಿತರಣಾ ಕೊಳವೆ ಕಾರ್ಯ ಮುಗಿದಿದ್ದು ಸಾರ್ವಜನಿಕ ನಲ್ಲಿಗಳು ಮತ್ತು ನೆಲ ಮಟ್ಟದ ಜಲಾಗಾರದ ಕೆಲಸ ಬಾಕಿ ಇದೆ.

೩. ೧೯೮೭ರ ಫೆಬ್ರುವರಿ ಮಾಹೆಯ ಕೊನೆಯ ವೇಳೆಗೆ ಒಟ್ಟು ರೂ. ೬.೦೮ ಲಕ್ಷಗಳು ಖರ್ಚಾಗಿದೆ.

ಆ) ರೈಲ್ವೇ ಕ್ರಾಸಿಂಗ್ ಇದ್ದು ಕೆಲಸಕ್ಕೆ ಪರವಾನಗಿ ದೊರೆಯುವುದು ತಡವಾದ್ದರಿಂದ ಈ ಯೋಜನೆಯ ಕೆಲಸ ತಡವಾಗಿದೆ.

ಹೊಳವನ ಹಳ್ಳಿ ಗ್ರಾಮದ ಹೊಸ ಬಡಾವಣೆಯಲ್ಲಿ ಮಂಜೂರಾದ ಜನತಾ ನಿವೇಶನಗಳ ಬಗ್ಗೆ.

೧೯೩೨. ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).— ಮಾನ್ಯ ಗ್ರಾಮಾಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊರಟಗೆರೆ ತಾಲ್ಲೂಕು ಹೊಳವನಹಳ್ಳಿ ಗ್ರಾಮದ ನಾಗರಕೆರೆಯ ಪಕ್ಕದ ಹೊಸ ಬಡಾವಣೆಯಲ್ಲಿ ಮಂಜೂರಾದ ಜನತಾ ನಿವೇಶನಗಳ ಸಂಖ್ಯೆ ಎಷ್ಟು ?

ಆ) ಯಾವ ಯಾವ ಜಾತಿಯವರಿಗೆ ನಿವೇಶನಗಳನ್ನು ಮಂಜೂರು ಮಾಡಲಾಗಿದೆ? (ಜಾತಿವಾರು ವಿವರ ನೀಡುವುದು)

ಇ) ಸದರಿ ನಿವೇಶನಗಳಲ್ಲಿ ಎಷ್ಟು ಮಂದಿಗೆ ಸರ್ಕಾರದವರು ಮನೆಗಳನ್ನು ನಿರ್ಮಿಸಿಕೊಳ್ಳಲು ಧನ ಸಹಾಯ ನೀಡಿದ್ದಾರೆ ? (ಯಾವ ಯಾವ ಜಾತಿಗೆ ಎಷ್ಟು ವಿವರ ನೀಡುವುದು)

ಈ) ಇನ್ನುಳಿದ ನಿವೇಶನಗಳಲ್ಲಿ ಮನೆಗಳನ್ನು ನಿರ್ಮಿಸಲು ಸರ್ಕಾರದವರು ಯಾವ ಕ್ರಮ ತೆಗೆದುಕೊಂಡಿದ್ದಾರೆ ?